

■ ಪ್ರವೀಣ್‌ಕುಮಾರ್ ಜಿ.
ಚಿತ್ರ: ಭರತ್ ಲದ್ದಿಯವರ್

ಆದಮೇಲೆ ಹುಟ್ಟಿದ್ದ ಒಂದನೇ ಕ್ಲಾಸಿನ ತಮ್ಮನಿಗೆ ಹೋಮ್ ವರ್ಕ್ ಮಾಡಿಸುತ್ತಿದ್ದೆ. ಗಣಿತದ ಲೆಕ್ಕಗಳನ್ನು ನಾನು ಎಷ್ಟೇ ಚೆನ್ನಾಗಿ ಹೇಳಿಕೊಟ್ಟರೂ, “ಹೋದೋರು ವಾಪಸ್ ಬರೋಕೆ ಇಷ್ಟೊತ್ತು ಆಗತ್ತೆ ಅಂದ್ರೆ ನಾನು ಯಾವತ್ತೂ ದೇವ್ರತ್ರ ಹೋಗಲ್ಲ. ನೀನು ತಪ್ ತಪ್ ಹೇಳಿ ಕೊಡ್ತಿ. ಅಮ್ಮ ಕರೆಕ್ಟ್ ಹೇಳಿ ಕೊಡ್ತಿತ್ತು” ಎಂದ. ಸಣ್ಣ ಬಾಯಲ್ಲಿ ಇಷ್ಟು ದೊಡ್ಡ ಮಾತೇ ಎಂದು ನಾನು ಅಚ್ಚರಿಪಡುತ್ತಿರುವಾಗ ಬಾಗಿಲು ಸದ್ದಾಯಿತು. ಅಮ್ಮ ಸತ್ತು ಒಂದು ತಿಂಗಳಾಗಿತ್ತು. ಆ ಬೇಜಾರಿನಲ್ಲಿ ತಡವಾಗಿ ಮನೆಗೆ ಬರಲತ್ತಿದ್ದ ಅಪ್ಪನನ್ನು ಬರಮಾಡಿಕೊಳ್ಳಲು ಎದ್ದೆ. ಎದ್ದು ನಾಲ್ಕು ಹೆಜ್ಜೆ ಇಡುವ ಮೊದಲೇ ಬಾಗಿಲಿಗೆ ಹಾಕಿದ್ದ ಕರ್ಟನ್ ತೆಗೆದುಕೊಂಡು ಅಮ್ಮ ಒಳ ಬಂದಳು!

“ಅಮ್ಮ” ಎಂದು ತಮ್ಮ ಅವಳನ್ನು ತಬ್ಬಿಕೊಂಡ. ನಾನೂ “ಅಮ್ಮಾ” ಎಂದು ಹತ್ತಿರ ಹೋಗಿ ಕೈ ಹಿಡಿದುಕೊಂಡೆ, ಅವಳು ಕೊಸರಿಕೊಂಡು ಬೆಡ್‌ರೂಮಿಗೆ ಹೋದಳು. ಅಂದು ರಾತ್ರಿ, “ಎದೆ ನೋಯ್ತಾ ಇದೆ” ಎಂದು ಅವಳೆಂದಾಗ “ನಡಿಯಮ್ಮಾ ಆಸ್ಪತ್ರೆಗೆ ಹೋಗೋಣ” ಎಂದಿದ್ದೆ. ಅವಳು “ಬೆಳಿಗ್ಗೆ ಹೋಗಾಣ. ಈಗ ಜಂಡೂಬಾಮ್ ಕೊಡು” ಎಂದಾಗ ತಂದುಕೊಟ್ಟಿದ್ದೆ. ಎದೆಗೆ ಹಚ್ಚಿಕೊಂಡು ಮಲಗಿದ್ದವಳು, ಬೆಳಿಗ್ಗೆ ಎದ್ದೇಳಲಿಲ್ಲ.

ಎದೆನೋವು ಎಂದ ಕೂಡಲೇ ತನ್ನನ್ನು ಬೈದು, ಕೂಡಲೇ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಿತ್ತು ಎಂದು ಈಗ ಅಂದುಕೊಳ್ಳುತ್ತಿದ್ದಾಳೋ ಏನೋ? ಅದೇ ಇಂದು ನನ್ನ ಮೇಲಿನ ಸಿಟ್ಟಾಗಿ ತಿರುಗಿದೆಯೋ ಎಂದುಕೊಂಡೆ. ಅಮ್ಮ ಬಂದಿರುವುದು ತಮ್ಮನಿಗೆ ಖುಷಿಕೊಟ್ಟಿತ್ತು. ಅವನ ಪಾಲಿಗೆ ಅಮ್ಮ ಸತ್ತೇ ಇರಲಿಲ್ಲವಲ್ಲ! ಅವನು, “ಅಮ್ಮಾ ಹೋಮ್‌ವರ್ಕ್ ಮಾಡ್ಸಮ್ಮಾ” ಎಂದಾಗ ಅಮ್ಮ, “ಇನ್ಮೇಲೆ ಹೋಮ್‌ವರ್ಕ್ ಮಾಡ್ಬೇಡ ಚಿನ್ನು” ಎಂದು ಅವನ ಖುಷಿಯನ್ನು ಇನ್ನೂ ಹೆಚ್ಚಿಸಿದಳು. ಅಮ್ಮನನ್ನು ಮಂಚದ ಮೇಲೆ ಕೂರಿಸಿ, ಖುಷಿಯಲ್ಲಿ ಅಮ್ಮನ ಕೈ ನೋಡಿದೆ, ಅವಳ ಬೆರಳಲ್ಲಿ ನನ್ನ ಹೆಸರಿನ ಇನಿಶಿಯಲ್ ಇದ್ದ ಉಂಗುರ ಇರಲಿಲ್ಲ! ಅದನ್ನು ಅವಳೊಂದಿಗೇ ಮಣ್ಣು ಮಾಡಿದ್ದೆವು. ಸಿಟ್ಟಿನಲ್ಲಿ ಎದ್ದು “ಯಾರ್ ನೀನು? ನಡೀ ಹೊರಾಗ” ಜೋರಾಗಿ ಗದರಿದೆ. ಅವಳು ಟಕ್ಕನೇ ಅಳು ನಿಲ್ಲಿಸಿ ಏನೂ ಮಾತಾಡದೇ ಎದ್ದು ಮನೆಯಿಂದ ಹೊರಗೆ ಹೋದಳು. ತಮ್ಮ ಅವಳ ಹಿಂದೆ ಓಡಲತ್ತಿದ, ತಮ್ಮನನ್ನು ಹಿಡಿದುಕೊಳ್ಳಲು ನಾನು ಹಿಂದೆ ಓಡಲತ್ತಿದೆ. ಓಡುತ್ತಾ ಓಡುತ್ತಾ ಏದುಸಿರು ಹತ್ತಿ ಮರುಕ್ಷಣವೇ ಕನಸಿನಿಂದ ಎದ್ದು ಬಿಡುತ್ತೇನೆ.

### 3. ರಿಮೋಟ್

ನನ್ನವಳು ಎಲ್ಲರಂತಲ್ಲ. ಅವಳು ಧಾರಾವಾಹಿ ನೋಡುವುದಕ್ಕಾಗಿ ಜಗಳವಾಡುತ್ತಿರಲಿಲ್ಲ, ಅವಳಿಗೆ ನ್ಯೂಸ್ ನೋಡಬೇಕಿತ್ತು. ನನಗೋ ಸೀರಿಯಲ್ ನೋಡಬೇಕಿತ್ತು. ರಿಮೋಟ್ ಬಿಟ್ಟರೆ ನಾವಿಬ್ಬರು ಯಾವುದಕ್ಕೂ ಜಗಳವಾಡುವುದೇ ಇಲ್ಲ. ಸೀರಿಯಲ್ ಹೀರೋಯಿನ್ನಿಗಿಂತ ನನ್ನ ಹೆಂಡತಿಯೇ ಚೆನ್ನಾಗಿದ್ದಾಳೆ. ಆದರೂ ಅವಳನ್ನು ರೇಗಿಸಲು ನಾನು ಆಗಾಗ ಸುಮ್ಮನೇ ರಿಮೋಟಿಗಾಗಿ ಜಗಳವಾಡಿ ಯಾವುದೋ ಧಾರಾವಾಹಿಯಲ್ಲಿನ ನಾಯಕಿಯನ್ನೇ ನೋಡುತ್ತಿದ್ದೆ. ಮೂವತ್ತೂರು ವರ್ಷಗಳ ಕಾಲ ‘ಟು ವೇ ಲವ್ವು’ ಎಂಬ ಬಲೆಗೆ ಬೀಳದೇ ಹಾಗೆಯೇ ಉಳಿದಿದ್ದಕ್ಕೆ ಇಷ್ಟು ಒಳ್ಳೆಯ ಹೆಂಡತಿ ಸಿಕ್ಕಳು ಎಂದು ಬಹಳ ಸಲ ಅಂದುಕೊಂಡಿದ್ದೇನೆ.

ರಾತ್ರಿ ಹತ್ತಾಗಿತ್ತು, ಆಫೀಸಿನಿಂದ ಬಂದವನೇ ರಿಮೋಟ್ ಕೊಡುವುದಿಲ್ಲ ಎಂದು ನಾನು ಅದನ್ನು ಬೆನ್ನ ಹಿಂದೆ ಬಚ್ಚಿಟ್ಟುಕೊಂಡಾಗ ಅವಳು ನನ್ನ ಮೇಲೆ ಬಿದ್ದು ಕಸಿದುಕೊಳ್ಳಲು ಬರದೇ ಬೆಡ್‌ರೂಮಿನ ಕಡೆಗೆ ನಡೆಯಲತ್ತಿದಳು. ನನಗೆ ಗಾಬರಿಯಾಗಲತ್ತಿತು. ಅಂದೂ ಹೀಗೆಯೇ, ಮೊದಲ ಸಲ ರಿಮೋಟಿಗಾಗಿ ಜಗಳವಾಡದವಳು ಬೆಡ್‌ರೂಮಿಗೆ ಹೋಗಿದ್ದಳು. ಸೀರಿಯಲ್ಲು ಮುಗಿಸಿ ನಾನು ಬೆಡ್‌ರೂಮಿಗೆ ಹೋದಾಗ ಫ್ಯಾನಿಗೆ ಮದುವೆ ಸೀರೆಯಲ್ಲಿ ನೇಣು ಹಾಕಿಕೊಂಡು ಸತ್ತಿದ್ದಳು.

ಈಗ ಅವಳ ಹಿಂದೆಯೇ ಓಡಿ ಹೋಗಿ ಅವಳನ್ನು ತಡೆಯಬೇಕು, ಉಳಿಸಿಕೊಳ್ಳಬೇಕು ಎಂದುಕೊಂಡು ಎದ್ದೆ, ಸಾಧ್ಯವಾಗಲೇ ಇಲ್ಲ. ಟಕ್ಕನೇ ಅರಿವಾಯಿತು, ನನಗಿದನ್ನು ಬದಲಾಯಿಸಲು ಸಾಧ್ಯವಿಲ್ಲ. ಒಳಗೆ ಹೋಗಿ ಅವಳು ನೇತಾಡುವುದನ್ನು ನೋಡಿದ ಕೂಡಲೇ ಇಡೀ ಬದುಕಿಗೆ ಸಾಕಾಗುವಷ್ಟು ಆಘಾತ ನನಗೆ ಒಂದೇ ಕ್ಷಣದಲ್ಲಿ ಬಡಿಯುತ್ತದೆ. ಅವಳು ಸತ್ತಿರುವುದನ್ನು ಇನ್ನೊಮ್ಮೆ ನೋಡುವುದು ಮತ್ತು ಆ ಸಾವಿನ ನೋವನ್ನು ಇನ್ನೊಮ್ಮೆ ಅನುಭವಿಸುವುದು ಎಷ್ಟೇ ಜನ್ಮವೆತ್ತಿದರೂ ನನಗೆ ಆಗುವುದಿಲ್ಲ. ಇಷ್ಟು ಯೋಚನೆ ಮಾಡುತ್ತಿರುವುದರಿಂದ ಈಗಿನದ್ದು ಕನಸು ಎಂದು ಅರಿವಾಗುತ್ತದೆ. ಈಗ ಕಣ್ಣು ಬಿಟ್ಟು ಅವಳು ಸತ್ತ ಎರಡು ವರ್ಷಗಳ ನಂತರದ ಸ್ಥಿತಿಗೆ ವಾಪಸ್ಸು ಹೋಗೋಣ ಎನಿಸುತ್ತದೆ, ಕಣ್ಣು ಬಿಡುತ್ತೇನೆ.

### 4. ಹೀರೊ

ಬೆಳಿಗ್ಗೆ ಹನ್ನೊಂದಾಗಿತ್ತು. ನಾನು ಯಾವುದೋ ಶೂಟಿಂಗಿನಲ್ಲಿ ಶಾಟ್ ಮುಗಿಸಿಕೊಂಡು ನನ್ನ ಸಹಾಯಕ ನನಗಾಗಿ ಇಟ್ಟಿದ್ದ ಕುರ್ಚಿಯಲ್ಲಿ ಕುಳಿತೆ. ಡೈರೆಕ್ಷನ್ ಡಿಪಾರ್ಟ್‌ಮೆಂಟಿನ ಹುಡುಗನೊಬ್ಬ ಬಂದು, ನನ್ನ ಅಸಿಸ್ಟೆಂಟಿಗೆ, “ಇನ್ನೊಂದ್ ಅರ್ಧ ಗಂಟೆ ಆಗ್ಬೋದು ನೆಕ್ಸ್ಟ್ ಶಾಟ್‌ಗೆ” ಎಂದು ಹೇಳಿ ಹೋದ. ಅಸಿಸ್ಟೆಂಟು, “ಆಯ್ತು” ಎಂದು ಅವನನ್ನು ಕಳುಹಿಸಿ ಮರುಕ್ಷಣವೇ ರಿಂಗಾದ ನನ್ನ ಮೊಬೈಲನ್ನು ನನಗೆ ಕೊಟ್ಟ. ಮೊಬೈಲು, ‘ಆನಂದ’ ಎಂದು ತೋರಿಸುತ್ತಿತ್ತು. ಎಷ್ಟೋ ವರ್ಷಗಳ ನಂತರ ಆ ಫೋನ್ ಬಂದಿತ್ತು. ಫೋನ್ ಇಸಿದುಕೊಂಡವನು ಎದ್ದೆ. ಹಿಂದೆ ಬರಲತ್ತಿದ ಅಸಿಸ್ಟೆಂಟಿಗೆ ಬೇಡ ಎಂದು ಸನ್ನೆ ಮಾಡಿದೆ.

‘ಆನಂದ’ ನಿಜವಾದ ಹೆಸರಲ್ಲ, ಅದು ‘ಅವಳಿಗೆ’ ನಾನಿಟ್ಟಿದ್ದ ಹೆಸರು. ಅವಳು ನಾನು ಮೊಟ್ಟ ಮೊದಲು ಇಷ್ಟಪಟ್ಟಿದ್ದ ಹುಡುಗಿ. ಅವಳೇನೂ ದೂರದವಳಲ್ಲ, ಸ್ವಂತ ಅತ್ತೆಯ ಮಗಳು. ಕೆಲವೇ ವರ್ಷಗಳ ಕೆಳಗೆ ನಾನು ಯಾವುದಾದರೂ ಕೆಲಸದಲ್ಲಿ ಇದ್ದಿದ್ದರೆ ನನ್ನ ಹೆಂಡತಿಯಾಗಿರುತ್ತಿದ್ದವಳು. ಒಳ್ಳೆಯ ಸಂಬಳದ ದೊಡ್ಡ ಕೆಲಸದಲ್ಲಿದ್ದ ನಾನು ಅದನ್ನು ಬಿಟ್ಟು ನನ್ನ ಜೀವನದ ಪರಮ ಆಸಕ್ತಿಯ ನಟನೆಯ ದಾರಿ ಹಿಡಿದಿದ್ದೆ. ಅವಳು ನನ್ನನ್ನು ನನ್ನ ಕೆಲಸದಿಂದ ದೂರ ಮಾಡಿ ಇಷ್ಟಪಡಲು ಶುರುಮಾಡಿದಳು. ಅವಳ ಪ್ರೀತಿ ಅವಳಿಗಾದರೂ ಹೆಚ್ಚು ದಿನ ಉಳಿಯಲಿಲ್ಲ.

ಶೂಟಿಂಗಿನ ಜಾಗದಿಂದ ದೂರ ಬಂದವನು ಫೋನ್ ರಿಸೀವ್ ಮಾಡಿದೆ. ಆ ಕಡೆಯಿಂದ ಅವಳು ಅವಸರದಲ್ಲಿ, “ಹಲೋ... ಹಲೋ ನಾನು” ಎಂದಾಗ, “ಗೊತ್ತಾಯ್ತು” ಎಂದೆ. “ಕಾರಲ್ಲಿ ಧರ್ಮಸ್ಥಳಕ್ಕೆ ಹೋಗ್ತಾ ಇದ್ವಿ. ಚಾರ್ಮಾಡಿ ಘಾಟಲ್ಲಿ ಲಾರಿಗೆ ಗುದ್ದಿ ಆಕ್ಸಿಡೆಂಟ್ ಆಗೋಯ್ತು. ಲಾರಿಯವ್ರು ಓಡೋದ. ನಮ್ಮೆಜಮಾನ್ರು ಇವಾಗ ಸತ್ತೋದ್ರು. ಯಾರಿಗೆ ಫೋನ್ ಮಾಡ್ಬೇಕು ಅಂತ ಗೊತ್ತಾಗ್ಲಿಲ್ಲ. ನಾನು, ನನ್ ಮಗು ಅಷ್ಟೇ ಇದೀವಿ.